## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2092 (2442) |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 27/03/2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (KRIES) ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಂಬೇಡ್ಕರ್, ಇಂದಿರಾ ಗಾಂಧಿ ಹಾಗೂ ಇತರೆ ವಸತಿ ಶಾಲೆಗಳು ಮೂಲಭೂತ ಸೌಲಭ್ಯಗಳ ಕೊರತೆ, ಶಿಕ್ಷಕರ ಹಾಗೂ ಬೋಧಕೇತರ ಸಿಬ್ಬಂದಿ ಹುದ್ದೆಗಳು ಖಾಲಿ ಉಳಿದಿರುವುದು ಹಾಗೂ ಇನ್ನೂ ಹಲವು ಸಮಸ್ಯೆಗಳು ಉಂಟಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.<br><br>ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಪಠ್ಯಪುಸ್ತಕ ಗಳನ್ನು ಪುಸ್ತಕ ಪ್ರಾಧಿಕಾರದಿಂದ, ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಮೆ\|\| ಎಂ.ಎಸ್.ಐ.ಎಲ್ ಸಂಸ್ಥೆಯಿಂದ, ಶುಚಿ ಸಂಭ್ರಮ ಕಿಟ್ (ಸೋಪ್, ಪೇಸ್ಟ್, ಬ್ರಶ್, ಹೇರ್ ಆಯಿಲ್ ಇತ್ಯಾದಿ) ಗಳನ್ನು ಮೆ\|\|ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ ರವರಿಂದ, ಸಿದ್ಧಪಡಿಸಿದ ಸಮವಸ್ತ್ರಗಳನ್ನು ಮೆ\|\| ಕೆ.ಹೆಚ್.ಡಿ.ಸಿ ಸಂಸ್ಥೆಯಿಂದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಡಿ 4(ಜಿ) ವಿನಾಯಿತಿ ಹೊಂದಿರುವ ಸರ್ಕಾರಿ ಸಂಸ್ಥೆಗಳಿಂದ ಖರೀದಿ ಮಾಡಲಾಗುತ್ತಿದೆ.<br><br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಸ್ವಂತ/ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆ/ಕಾಲೇಜುಗಳಿಗೆ ಒಂದೇ ಬಾರಿಗೆ (One time) 13 ವಿವಿಧ ಬಗೆಯ ಮೂಲಭೂತ ಅವಶ್ಯಕ ಸಾಮಗ್ರಿಗಳನ್ನು ಒದಗಿಸಲು 2025-26ನೇ ಸಾಲಿನ ಆಯವ್ಯಯ ಕಂಡಿಕೆ 178 ರಲ್ಲಿ ವಸತಿ ಶಾಲೆಗಳಿಗೆ ಒಟ್ಟು ರೂ. 213.00 ಕೋಟಿ ವೆಚ್ಚದಲ್ಲಿ ಅಗತ್ಯವಿರುವ 13 ವಿವಿಧ ಬಗೆಯ ಸಾಮಗ್ರಿಗಳಾದ ಡೆಸ್ಕ್ ಕಂ ಬೆಂಚ್, ಹಾಸಿಗೆಗಳು, ದಿಂಬುಗಳು, ಬೆಡ್‌ಶೀಟ್, ಬೆಡ್‌ಸ್ಪ್ರೆಡ್, ತಟ್ಟೆ-ಲೋಟಗಳು, ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ), ಪೀಠೋಪಕರಣಗಳು, ಪ್ರಯೋಗಾಲಯ ಸಾಮಗ್ರಿಗಳು (ಸೆಟ್ ಗಳಲ್ಲಿ), ಪ್ರೊಜೆಕ್ಟರ್ ಮತ್ತು ಸ್ಕ್ರೀನ್, ನರ್ಸಿಂಗ್ ಕಿಟ್, ವಾಟರ್ ಪ್ಯೂರಿಫೈಯರ್, ಡೆಸ್ಕ್ ಕಮ್ ಬೆಂಚ್ 5 ಸೀಟರ್, ಟು ಟೈರ್ ಕಾಟ್, ಮತ್ತು ಗ್ರೈಂಡರ್‌ಗಳನ್ನು ಒದಗಿಸಲು ಘೋಷಿಸಿರುವಂತೆ ಆದೇಶ ಸಂಖ್ಯೆ: ಸಕಇ 23 ಎಂಡಿಎಸ್ 2025 ದಿನಾಂಕ:05.04.2025 ರಂದು ಆದೇಶ ಹೊರಡಿಸಲಾಗಿದೆ. ಅದರನ್ವಯ 13 ವಿವಿಧ ಬಗೆಯ ಸಾಮಗ್ರಿಗಳನ್ನು KTPP-1999ರ ನಿಯಮಾನುಸಾರ ಖರೀದಿಸಿ ಪೂರೈಸಲು ಈಗಾಗಲೇ ಕ್ರಮವಹಿಸಲಾಗಿದ್ದು, ಈ ಪೈಕಿ, ಹಾಸಿಗೆ, ದಿಂಬು, ತಟ್ಟೆ-ಲೋಟಗಳು, ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ), |

ಪೀಠೋಪಕರಣಗಳು, ಪ್ರಯೋಗಾಲಯ ಸಾಮಗ್ರಿಗಳು (ಸೆಟ್ ಗಳಲ್ಲಿ), ಪ್ರೊಜೆಕ್ಟರ್ ಮತ್ತು ಸ್ಕ್ರೀನ್, ನರ್ಸಿಂಗ್ ಕಿಟ್, ವಾಟರ್ ಪ್ಯೂರಿಫೈಯರ್, ಡೆಸ್ಕ್ ಕಮ್ ಬೆಂಚ್ 5 ಸೀಟರ್, ಗ್ರೈಂಡರ್‌ಗಳನ್ನು ಈಗಾಗಲೇ ಪೂರೈಸಲು ಕ್ರಮವಹಿಸಲಾಗಿರುತ್ತದೆ ಮತ್ತು ಟು ಟೈರ್ ಕಾಟ್ ಗಳನ್ನು ಒದಗಿಸಲು ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ತುರ್ತಾಗಿ ಒದಗಿಸಲು ಕ್ರಮವಹಿಸಲಾಗುವುದು.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳಿಗೆ 1986 (9262 ಬೋಧಕ, 2386 ಬೋಧಕೇತರ, 8213-ಗ್ರೂಪ್-ಡಿ) ಬೋಧಕ, ಬೋಧಕೇತರ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳು ಮಂಜೂರಾಗಿರುತ್ತವೆ. ವಿವರ ಈ ಕೆಳಕಂಡಂತಿದೆ.

| ವೃಂದ | ಮಂಜೂರಾದ ಸಂಖ್ಯೆ | ಖಾಯಂ ಸಿಬ್ಬಂದಿಗಳ ಸಂಖ್ಯೆ |
|---|---|---|
| ಬೋಧಕ ಸಿಬ್ಬಂದಿ | 9262 | 5456 |
| ಬೋಧಕೇತರ ಸಿಬ್ಬಂದಿ | 2386 | 1120 |
| ಗ್ರೂಪ್ 'ಡಿ | 8213 | 7 |
| **ಒಟ್ಟು** | **19861** | **6583** |

5456 ಬೋಧಕರು ಮತ್ತು 1120 ಬೋಧಕೇತರ ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಖಾಲಿ ಇರುವ ಹುದ್ದೆಗಳ ಎದುರಾಗಿ ಜಿಲ್ಲಾ ಹಂತದಲ್ಲಿ ಅತಿಥಿ ಶಿಕ್ಷಕರು/ಹೊರಸಂಪನ್ಮೂಲ ಏಜೆನ್ಸಿ ಮೂಲಕ ಶಿಕ್ಷಕರು/ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಪಡೆದು ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. ಗ್ರೂಪ್-ಡಿ ವೃಂದದ ಹುದ್ದೆಗಳನ್ನು ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ.

**ಆ)** ರಾಜ್ಯದಲ್ಲಿ KRIES ಅಧೀನದಲ್ಲಿರುವ ಒಟ್ಟು ವಸತಿ ಶಾಲೆಗಳ ಸಂಖ್ಯೆ ಎಷ್ಟು; ಮಂಜೂರುಗೊಳಿಸಲಾದ ಶಿಕ್ಷಕರ ಸಂಖ್ಯೆ ಎಷ್ಟು; ಪ್ರಸ್ತುತ ಭರ್ತಿಯಾದ ಮತ್ತು ಖಾಲಿ ಉಳಿದಿರುವ ಹುದ್ದೆಗಳ ವಿಷಯವಾರು ಹಾಗೂ ವರ್ಗವಾರು ಜಿಲ್ಲಾವಾರು ಮಾಹಿತಿ ನೀಡುವುದು;

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಂಘದ ವಸತಿ ಶಾಲೆ/ ಕಾಲೇಜುಗಳಿಗೆ ಒಟ್ಟು ಮಂಜೂರಾಗಿರುವ 19861 ಹುದ್ದೆಗಳಲ್ಲಿ 9262 ಬೋಧಕ ಹುದ್ದೆಗಳು ಮಂಜೂರಾಗಿದ್ದು, 5456 ಖಾಯಂ ಬೋಧಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಉಳಿದ 3806 ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ವಿಷಯವಾರು ಹಾಗೂ ವಿವರಗಳನ್ನು ಅನುಬಂಧ-01ರಲ್ಲಿ ನೀಡಲಾಗಿದೆ.

ಖಾಲಿ ಇರುವ 3806 ಹುದ್ದೆಗಳ ಎದುರಾಗಿ ಜಿಲ್ಲಾ ಹಂತದಲ್ಲಿ ಅತಿಥಿ ಶಿಕ್ಷಕರು/ಹೊರಸಂಪನ್ಮೂಲ ಏಜೆನ್ಸಿ ಮೂಲಕ ಶಿಕ್ಷಕರು/ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಪಡೆದು ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. ಗ್ರೂಪ್-ಡಿ ವೃಂದದ ಹುದ್ದೆಗಳನ್ನು ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲಾಗುತ್ತಿದೆ.

| | | |
|---|---|---|
| ಇ) | ಅತಿಥಿ ಶಿಕ್ಷಕರು/ ಹೊರಗುತ್ತಿಗೆ ಮೂಲಕ ನೇಮಕಾತಿ ಮಾಡಲಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು, ಅವರಿಗೆ ನೀಡಲಾಗುತ್ತಿರುವ ವೇತನ, ಸೇವಾ ಭದ್ರತೆ ಬಗ್ಗೆ ಸರ್ಕಾರದ ನೀತಿ ಏನು; ವಸತಿ ಶಾಲೆಗಳಲ್ಲಿ ವಿದ್ಯಾರ್ಥಿ-ಶಿಕ್ಷಕ ಅನುಪಾತ ಎಷ್ಟು; ಅದು ರಾಷ್ಟ್ರೀಯ ಶಿಕ್ಷಣ ನೀತಿ (NEP) ಹಾಗೂ RTE ನಿಯಮಾವಳಿಗಳ ಮಾನದಂಡಗಳಿಗೆ ಅನುಗುಣವಾಗಿದೆಯೇ: | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಂಘದ ವಸತಿ ಶಾಲೆಗಳಲ್ಲಿ 6 ರಿಂದ 10ನೇ ತರಗತಿಯವರೆಗೆ 250 ವಿದ್ಯಾರ್ಥಿಗಳ ಸಂಖ್ಯಾಬಲ ಮಂಜೂರಾಗಿದ್ದು, 250 ಸಂಖ್ಯಾಬಲದ ವಸತಿ ಶಾಲೆಗಳಿಗೆ 11 ಬೋಧಕ, 03 ಬೋಧಕೇತರ ಮತ್ತು 11 ಗ್ರೂಪ್ ಡಿ ವೃಂದದ ಹುದ್ದೆಗಳು ಸೇರಿ 25 ಹುದ್ದೆಗಳು ಮಂಜೂರಾಗಿರುತ್ತವೆ.<br>ಖಾಲಿ ಇರುವ ಹುದ್ದೆಗಳ ಎದುರಾಗಿ ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ 494 ಹೊರಸಂಪನ್ಮೂಲ ಶಿಕ್ಷಕರು ಹಾಗೂ 3075 ಅತಿಥಿ ಶಿಕ್ಷಕ/ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಶಿಕ್ಷಕರಿಗೆ ರೂ. 16,650/- ಗಳನ್ನು ಹಾಗೂ ಉಪನ್ಯಾಸಕರಿಗೆ ರೂ. 18,150/- ಗಳ ವೇತನವನ್ನು ಪಾವತಿಸಲಾಗುತ್ತಿದೆ.<br>ರಾಷ್ಟ್ರೀಯ ಶಿಕ್ಷಣ ನೀತಿ (NEP) ಹಾಗೂ RTE ನಿಯಮಾವಳಿಗಳನ್ವಯ ವಿದ್ಯಾರ್ಥಿ-ಶಿಕ್ಷಕರ ಅನುಪಾತವನ್ನು 30:1ರಷ್ಟು ನಿಗದಿಪಡಿಸಿದ್ದು, ಸಂಘದ ವಸತಿ ಶಾಲೆಗಳಲ್ಲಿ 250 ವಿದ್ಯಾರ್ಥಿಗಳಿಗೆ 11 ಬೋಧಕ ಹುದ್ದೆಗಳು ಮಂಜೂರಾಗಿದ್ದು, ವಿದ್ಯಾರ್ಥಿ-ಶಿಕ್ಷಕರ ಅನುಪಾತದ 22:1ರಷ್ಟು ಮಂಜೂರಾಗಿರುತ್ತದೆ. |
| ಈ) | ವಿದ್ಯಾರ್ಥಿಗಳ ವಸತಿ ಗೃಹಗಳಲ್ಲಿ ಕುಡಿಯುವ ನೀರು, ಶೌಚಾಲಯ, ಸ್ನಾನಗೃಹ, ವಿದ್ಯುತ್, ಅಗ್ನಿ ನಿರೋಧಕ ಉಪಕರಣಗಳು, CCTV, ಆವರಣ ಗೋಡೆ ಹಾಗೂ ಆರೋಗ್ಯ ತಪಾಸಣೆ ಸೌಲಭ್ಯಗಳ ಸ್ಥಿತಿ ಏನು; ಇವುಗಳಿಗೆ ಸಂಬಂಧಿಸಿದಂತೆ ನಿಯಮಿತವಾಗಿ ತಪಾಸಣೆ ನಡೆಸಲಾಗಿದೆಯೇ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಸ್ವಂತ/ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆ/ಕಾಲೇಜುಗಳಿಗೆ ಒಂದೇ ಬಾರಿಗೆ (One time) 13 ವಿವಿಧ ಬಗೆಯ ಮೂಲಭೂತ ಅವಶ್ಯಕ ಸಾಮಗ್ರಿಗಳನ್ನು ಒದಗಿಸಲು 2025-26ನೇ ಸಾಲಿನ ಆಯವ್ಯಯ ಕಂಡಿಕೆ 178 ರಲ್ಲಿ ವಸತಿ ಶಾಲೆಗಳಿಗೆ ಒಟ್ಟು ರೂ. 213.00 ಕೋಟಿ ವೆಚ್ಚದಲ್ಲಿ ಅಗತ್ಯವಿರುವ 13 ವಿವಿಧ ಬಗೆಯ ಸಾಮಗ್ರಿಗಳಾದ ಡೆಸ್ಕ್ ಕಂ ಬೆಂಚ್, ಹಾಸಿಗೆಗಳು, ದಿಂಬುಗಳು, ಬೆಡ್‌ಶೀಟ್, ಬೆಡ್‌ಸ್ಪ್ರೆಡ್, ತಟ್ಟೆ-ಲೋಟಗಳು, ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ), ಪೀಠೋಪಕರಣಗಳು, ಪ್ರಯೋಗಾಲಯ ಸಾಮಗ್ರಿಗಳು (ಸೆಟ್ ಗಳಲ್ಲಿ), ಪ್ರೊಜೆಕ್ಟರ್ ಮತ್ತು ಸ್ಕ್ರೀನ್, ನರ್ಸಿಂಗ್ ಕಿಟ್, ವಾಟರ್ ಪ್ಯೂರಿಫೈಯರ್, ಡೆಸ್ಕ್ ಕಮ್ ಬೆಂಚ್ 5 ಸೀಟರ್, ಟು ಟೈರ್ ಕಾಟ್, ಮತ್ತು ಗ್ರೈಂಡರ್‌ಗಳನ್ನು ಒದಗಿಸಲು ಘೋಷಿಸಿರುವಂತೆ ಆದೇಶ ಸಂಖ್ಯೆ: ಸಕಇ 23 ಎಂಡಿಎಸ್ 2025 ದಿನಾಂಕ:05.04.2025 ರಂದು ಆದೇಶ ಹೊರಡಿಸಲಾಗಿದೆ. ಅದರನ್ವಯ 13 ವಿವಿಧ ಬಗೆಯ ಸಾಮಗ್ರಿಗಳನ್ನು KTPP-1999ರನ್ವಯ ನಿಯಮಾನುಸಾರ ಖರೀದಿಸಿ ಪೂರೈಸಲು ಈಗಾಗಲೇ ಕ್ರಮವಹಿಸಲಾಗಿದ್ದು, ಈ ಪೈಕಿ, ವಾಟರ್ ಪ್ಯೂರಿಫೈಯರ್‌ಗಳನ್ನು 809 ವಸತಿ ಶಾಲೆಗಳಿಗೆ 3103 ಪರಿಮಾಣದಲ್ಲಿ ಪೂರೈಸಲು ಕ್ರಮವಹಿಸಲಾಗಿರುತ್ತದೆ.<br>2026-27ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಿಗೆ CCTV ಒಳಗೊಂಡಂತೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.50.00 ಕೋಟಿಗಳ ಅನುದಾನವನ್ನು ಒದಗಿಸಿದ್ದು, ಬೇಡಿಕೆಯಿರುವ ವಸತಿ ಶಾಲೆ/ಕಾಲೇಜುಗಳಿಗೆ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದ ಮಿತಿಯಲ್ಲಿ KTPP-1999ರನ್ವಯ ನಿಯಮಾನುಸಾರ ಖರೀದಿಸಿ ಒದಗಿಸಲು ಕ್ರಮವಹಿಸಲಾಗುವುದು. |

| | | |
|---|---|---|
| | | ಆದೇಶ ಸಂಖ್ಯೆ: ಸಕಇ 49 ಎಂಡಿಎಸ್ 2025, ಬೆಂಗಳೂರು, ದಿನಾಂಕ:15.02.2025 ರಲ್ಲಿ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಅಗ್ನಿ ಸುರಕ್ಷತಾ ಉಪಕರಣಗಳನ್ನು ಖರೀದಿಸಿ ಒದಗಿಸಲು ಆದೇಶಿಸಲಾಗಿದ್ದು, ಅದರನ್ವಯ KTPP-1999ರನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಯಶಸ್ವಿ L-1 ಬಿಡ್‌ದಾರರಿಗೆ ದಿನಾಂಕ:31.01.2026ರಂದು ಸರಬರಾಜು ಆದೇಶ ನೀಡಲಾಗಿದ್ದು, ಸರಬರಾಜು ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಊ) | ಕಳೆದ ಮೂರು ವರ್ಷಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಮಂಜೂರಾದ ಅನುದಾನ ಬಿಡುಗಡೆಗೊಂಡ ಮೊತ್ತ ಹಾಗೂ ಖರ್ಚಾದ ಮೊತ್ತವೆಷ್ಟು; ಅನುದಾನ ಬಳಕೆಯ ಶೇಕಡಾವಾರು ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ವಸತಿ ಶಾಲೆ/ ಕಾಲೇಜುಗಳ ನಿರ್ವಹಣೆಗಾಗಿ ಹಾಗೂ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳಿಗಾಗಿ ಆಯವ್ಯಯದಲ್ಲಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಿಗೆ ನಿಗದಿಪಡಿಸಿ ಆಯಾ ಇಲಾಖೆವಾರು ಅನುದಾನ ಹಂಚಿಕೆಯಾಗಿ ಸಂಘದ ರಾಜ್ಯ ವಲಯದ ಲೆಕ್ಕ ಶೀರ್ಷಿಕೆಗಳಡಿ ಅನುದಾನವನ್ನು ಸಂಘಕ್ಕೆ ಬಿಡುಗಡೆ ಮಾಡಲಾಗುತ್ತಿದೆ. ಜಿಲ್ಲಾವಾರು ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಲಾಗುತ್ತಿಲ್ಲ.<br><br>2024-25ನೇ ಸಾಲಿನ ಪೂರ್ವದಲ್ಲಿ ವಸತಿ ಶಾಲೆ/ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಯಾವುದೇ ಪ್ರತ್ಯೇಕ ಅನುದಾನ ಬಿಡುಗಡೆಯಾಗಿರುವುದಿಲ್ಲ. ವಸತಿ ಶಾಲೆ/ಕಾಲೇಜುಗಳ ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನದ ಉಳಿಕೆ ಮೊತ್ತದಲ್ಲಿ ಬೇಡಿಕೆ ಅನುಸಾರ ಭಾಗಶಃ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.<br><br>2025-26ನೇ ಸಾಲಿನ ಆಯವ್ಯಯ ಕಂಡಿಕೆ 178 ರಲ್ಲಿ ಕ್ರೈಸ್ ವಸತಿ ಶಾಲೆಗಳಿಗೆ ಒಟ್ಟು ರೂ. 213.00 ಕೋಟಿ ವೆಚ್ಚದಲ್ಲಿ ಅಗತ್ಯವಿರುವ ಡೆಸ್ಕ್, ಬೆಂಚ್, ಪೀಠೋಪಕರಣಗಳು ಇತ್ಯಾದಿ ಶೈಕ್ಷಣಿಕ ಮೂಲಸೌಕರ್ಯಗಳನ್ನು ಒದಗಿಸಲು ಘೋಷಿಸಿರುವಂತೆ ಆದೇಶ ಸಂಖ್ಯೆ: ಸಕಇ 23 ಎಂಡಿಎಸ್ 2025 ದಿನಾಂಕ:05.04.2025 ರಂದು ಆದೇಶಿಸಲಾಗಿದೆ. ಅದರಂತೆ, ನಿಯಮಾನುಸಾರ 13 ಸಾಮಗ್ರಿಗಳಿಗೆ ಸಾಮಗ್ರಿವಾರು ಟೆಂಡರ್ ಆಹ್ವಾನಿಸಿ, ನಿಯಮಾನುಸಾರ ಸರಬರಾಜು ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ.<br><br>2026-27 ನೇ ಸಾಲಿನ ಆಯವ್ಯಯ ಕಂಡಿಕೆ 186 ರಲ್ಲಿ ಕ್ರೈಸ್ ವಸತಿ ಶಾಲೆಗಳಿಗೆ ಅಗತ್ಯವಿರುವ ಡೆಸ್ಕ್, ಬೆಂಚ್, ಪೀಠೋಪಕರಣಗಳು, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್ ಮತ್ತು ವಿಜ್ಞಾನ ಪ್ರಯೋಗಾಲಯ, ಹಾಸಿಗೆ-ಹೊದಿಕೆ, ಟೂಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಸಿಸಿಟಿವಿ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ನೀಡಲು ರೂ.50.00 ಕೋಟಿಗಳನ್ನು ಘೋಷಿಸಲಾಗಿರುತ್ತದೆ. |

**ಊ)** ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಫಲಿತಾಂಶದ ವಿವರ ನೀಡುವುದು; ಶಿಕ್ಷಕರ ಕೊರತೆ ಮತ್ತು ಮೂಲಸೌಕರ್ಯ ಸಮಸ್ಯೆಗಳು ಫಲಿತಾಂಶದ ಮೇಲೆ ಪರಿಣಾಮ ಬೀರಿದೆಯೇ ಎಂಬುದರ ಕುರಿತು ಸರ್ಕಾರ ಪರಿಶೀಲನೆ ನಡೆಸಿದೆಯೇ?

ಸಂಘದ ವಸತಿ ಶಾಲೆ/ ಕಾಲೇಜುಗಳಿಗೆ ಒಟ್ಟು ಮಂಜೂರಾಗಿರುವ 19861 ಹುದ್ದೆಗಳ ಪೈಕಿ 9262 ಬೋಧಕ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 5456 ಖಾಯಂ ಬೋಧಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಖಾಲಿ ಇರುವ ಹುದ್ದೆಗಳ ಎದುರಾಗಿ ಜಿಲ್ಲಾ ಹಂತದಲ್ಲಿ ಅತಿಥಿ ಶಿಕ್ಷಕರು/ಹೊರಸಂಪನ್ಮೂಲ ಏಜೆನ್ಸಿ ಮೂಲಕ ಶಿಕ್ಷಕರು/ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಪಡೆದು ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದ್ದಾರೆ.

2022-23 2023-24 ಮತ್ತು 2024-25ನೇ ಸಾಲುಗಳಲ್ಲಿನ ಫಲಿತಾಂಶದ ವಿವರ ಈ ಕೆಳಕಂಡಂತಿದೆ.

| Years | SSLC Result | | |
|---|---|---|---|
| | KREIS Pass Percentage(%) | State Pass Percentage(%) | Difference Percentage (%) |
| 2022-23 | 98.34 | 83.89 | 14.45 |
| 2023-24 | 96.00 | 73.40 | 22.60 |
| 2024-25 | 91.00 | 62.34 | 28.66 |

ಕಳೆದ 03 ವರ್ಷಗಳಿಗೆ ರಾಜ್ಯದ ಎಸ್.ಎಸ್.ಎಲ್.ಸಿ. ಫಲಿತಾಂಶಕ್ಕೆ ಹೋಲಿಕೆ ಮಾಡಿದಲ್ಲಿ, ಸಂಘದ ವಸತಿ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬಂದಿರುತ್ತದೆ.

| Years | PUC Result | | |
|---|---|---|---|
| | KREIS Pass Percentage(%) | State Pass Percentage(%) | Difference |
| 2022-23 | 95.00 | 63.63 | 31.37 |
| 2023-24 | 97.68 | 74.02 | 23.66 |
| 2024-25 | 91.64 | 57.11 | 34.53 |

ಕಳೆದ 03 ವರ್ಷಗಳಿಗೆ ರಾಜ್ಯದ ಪಿ.ಯು.ಸಿ ಫಲಿತಾಂಶಕ್ಕೆ ಹೋಲಿಕೆ ಮಾಡಿದಲ್ಲಿ ಸಂಘದ ವಸತಿ ಕಾಲೇಜುಗಳಲ್ಲಿ ಉತ್ತಮ ಫಲಿತಾಂಶ ಬಂದಿರುತ್ತದೆ.

**SWD/121/MDS/2026**

**(ಡಾ: ಹೆಚ್.ಸಿ ಮಹದೇವಪ್ಪ)**

ಸಮಾಜ ಕಲ್ಯಾಣ ಸಚಿವರು.